**ದಿನಾಂಕಃ 07/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಡಿ ಪಿ ಎಲ್ ವಕೀಲರಿಂದಃ**

1. ನನ್ನ ದೂರಿನಲ್ಲಿ ಏನು ಬರೆಸಿದ್ದೇನೆ ಎಂದು ನೆನಪಿಲ್ಲ. ಪೋಲೀಸರು ದೂರನ್ನು ಬರೆದರು. ಜಮೀನಿನ ಬಳಿ ಪೋಲೀಸರು ಬಂದಾಗ ನಾನೇ ಹೇಳಿ ದುಪರನ್ನು ಬರೆಸಿದೆ. ಬರವಣಿಗೆ ಮುಖಾಂತರ ದೂರನ್ನು ಬರೆದುಕೊಂಡರು. ಆಗ ಸಮಯ ಬೆ 10.00-10.30 ಗಂಟೆ ಆಗಿತ್ತು. ಪೋಲೀಸರು ಜಮೀನಿನ ಬಳಿ ಬಂದು ಪೋನ್ ಮಾಡಿದಾಗ ನಾನು ಹೋಗಿ ದುಪರನ್ನು ನೀಡಿದೆ. ಆ ಸಮಯದಲ್ಲಿ ರಾಮೇಗೌಡ, ರಾಘವೇಂದ್ರ ಮತ್ತು ನಾನು ಇದ್ದೆ. ಬರವಣಿಗೆ ಮುಗಿದ ನಂತರ ಪೋಲೀಸರು ಠಾಣೆಗೆ ಬಂದರು. ನಾನು ಸ್ಥಳದಲ್ಲಿ ಸಹಿ ಮಾಡಿದೆ.

2. ನಾನು ದೂರು ನೀಡಿದ ನಂತರ ಠಾಣೆಗೆ ನನ್ನನ್ನು ಬರಮಾಡಿಕೊಂಡಿದ್ದರು. 4-5 ದಿನಗಳ ನಂತರ ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ದೇವೇಂದ್ರ, ಜನಾರ್ಧನ್ ಮತ್ತು ನಾನು ಹಾಗೂ ಪೋಲೀಸರು ಇದ್ದರು. ಪೋಲೀಸರು 6 ಹಾಳೆಗೆ ಸಹಿ ಪಡೆದರು. ಆರು ಸಹಿಗಳಿಗಿಂತ ಹೆಚ್ಚು ಸಹಿ ಮಾಡಿದ್ದೇನೆ. ಠಾಣೆಯಲ್ಲಿ ಜನಾರ್ಧನ್ ಮತ್ತು ದೇವೇಂದ್ರ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಜನಾರ್ಧನ್ ಮತ್ತು ದೇವೇಂದ್ರ ನನ್ನ ಅಕ್ಕ ಪಕ್ಕದ ಮನೆಯವರು.

3. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿರುವ ಸಹಿ ನಿಮ್ಮದಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ದಾಖಲೆಯ ಹೆಸರನ್ನು ತಿಳಿಸಿರುವುದಿಲ್ಲ, ಆದಕಾರಣ ಪುನಃ ನ್ಯಾಯಾಲಯ ಆ ದಾಖಲೆ ಒಪ್ಪಿಗೆ ಪತ್ರವಾಗಿದ್ದು ಅದರಲ್ಲಿರುವ ಸಹಿ ನಿಮ್ಮದಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಒಪ್ಪಿಗೆ ಪತ್ರಕ್ಕೆ ಪಿರಿಯಾಪಟ್ಟಣ ನೋಟರಿಯವರ ಮುಂದೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಸಹಿಯನ್ನು ತೋರಿಸಿ ಇದು ಯಾರದ್ದು ಎಂದರೆ ನನ್ನ ಸಹಿ ಎಂದು ನುಡಿಯುತ್ತಾರೆ.

4. ನಾಲೆ ಆರೋಪಿತನ ಜಮೀನಿನಲ್ಲಿ ಇದೆ ಎಂದರೆ ಸರಿಯಲ್ಲ. ಈ ಸಂಬಂಧ ಹಿರಿಯ ಶ್ರೇಣಿ ನ್ಯಾಯಾಲಯದ ಮುಖಾಂತರ ಸರ್ವೇಯರ್ ಬಂದು ಅಳತೆ ಮಾಡಿದರು ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿ ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾನು ಅರ್ಜಿ ಸಲ್ಲಿಸಿದ ನಂತರ ಸ್ಥಳ ತನಿಖೆ ಮಾಡಿ ನಾಲೆ ನನ್ನ ಜಮೀನಿನಲ್ಲಿ ಇಲ್ಲ ಎಂದು ನನ್ನ ಅರ್ಜಿಯನ್ನು ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ ಪರಿಹಾರದ ಹಣವನ್ನು ಆರೋಪಿತನಿಗೆ ನೀಡಬೇಕೆಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ನಾನು ಇಂದ್ರೇಶ್ ರವರ ಮಾತು ಕೇಳಿ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ಹೆಚ್ಚಿನ ಪರಿಹಾರದ ಹಣ ಬಂದಿದೆ ಎಂದು ಹೊಟ್ಟೆಕಿಚ್ಚಿನಿಂದ ನಾನು ಮತ್ತು ಇತರರು ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

5. ಬೈಲುಕುಪ್ಪೆ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಆರೋಪಿತ ಸಾಲ ತೀರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಂದೆ ಆರೋಪಿತ ನನ್ನ ಸಹಿಯನ್ನು ಪೋರ್ಜರಿ ಮಾಡಿಲ್ಲ. ಆರೋಪಿತ ನನ್ನ ಪೋರ್ಜರಿ ಸಹಿ ಮಾಡಿದ ಬಗ್ಗೆ ಯಾರು ನೋಡಿಲ್ಲ. ದೂರಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**